'ಅರೆಕಾನಟ್ ಗ್ರೋವರ್ಸ್' ಹೆಸರಿನ ವಾಟ್ಸ್ಆ್ಯಪ್ ಗುಂಪಿನಲ್ಲಿ ನಿತ್ಯ ಮಳೆಯ ಮಾತು. ಮಳೆಯ ಲೆಕ್ಕಾಚಾರಗಳ ದಾಖಲಾತಿ ಮತ್ತು ಮಾಹಿತಿ. ಭೂತ, ವರ್ತಮಾನದ ನಿಖರ ಅಂಕಿಅಂಶಗಳು. ಭವಿಷ್ಯದಲ್ಲಿ ಸುರಿಯಬಹುದಾದ ಮಳೆಯ ಅಂದಾಜಿನ ಊಹೆ. ಹವಾಮಾನದೊಂದಿಗೆ ಗಣಿತದ ಆಟ.

ಇವರೇನು ಸರ್ಕಾರಿ ಅಧಿಕಾರಿಯಲ್ಲ. ಹವಾಮಾನ ಇಲಾಖೆಗೂ ಇವರಿಗೂ ಸಂಬಂಧವಿಲ್ಲ. ಹವಾಮಾನದ ವಿವರಗಳನ್ನು ಬರೆಯುವುದಕ್ಕಿಂತ ಹವಾಮಾನವನ್ನು ಓದಲು ಕಲಿಯಬೇಕು, ಎಂದು 'ಮಳೆಯ ಲೆಕ್ಕದ ಮಾಸ್ಟ್ರು' ಪಿಜಿಎಸ್‌ಎನ್ ಪ್ರಸಾದ್ ಹೇಳಿದ್ದರು. ಓದುವುದು ಹೇಗಪ್ಪಾ? ತಲೆಯೊಳಗೆ ಹುಳ ಬಿಟ್ಟಿದ್ದರು. ಹವಾಮಾನದೊಂದಿಗೆ ನಿತ್ಯ ಟ್ಯೂನ್ ಆಗುತ್ತಾ ಇದ್ದಂತೆ ಈ ಜ್ಞಾನ ನಮ್ಮದಾಗುತ್ತದೆ.

ಶಾಲೆಯ ಲೆಕ್ಕವೇ ತಲೆಗೆ ಭಾರವಾಗುತ್ತದೆ! ಇನ್ನು ಮಳೆಯ ಲೆಕ್ಕ ಯಾರಿಗೆ ಬೇಕು? ಎನ್ನುತ್ತಾ ಆಕಳಿಸುತ್ತಿದ್ದರೆ ಹವಾಮಾನ ಜ್ಞಾನ ನಮ್ಮದಾಗಲಾರದು. ಪ್ರಕೃತಿಯ ಜತೆಯಲ್ಲಿ ಆಡುವುದು ಕೂಡಾ ಒಂದು ಜ್ಞಾನ. ನಮಗ್ಯಾರಿಗೂ ಯಾವುದಕ್ಕೂ ಪುರುಸೊತ್ತಿಲ್ಲ ಬಿಡಿ! ಸುಳ್ಯ ತಾಲೂಕಿನ (ದ.ಕ. ಜಿಲ್ಲೆ) ಬಾಳಿಲದ ಪಿಜಿಎಸ್‌ಎನ್ ಪ್ರಸಾದರಿಗೆ ಪುರುಸೊತ್ತಿದೆ. ಅದೂ ನಲವತ್ತು ನವಲತ್ತೆರಡು ವರುಷಗಳಿಂದ!

ಇವರ ಪೂರ್ತಿ ಹೆಸರು ಪಾತಾಜೆ ಗೋವಿಂದಯ್ಯ ಸತ್ಯನಾರಾಯಣ ಪ್ರಸಾದ್. ನಾಲ್ಕು ದಶಕದಿಂದ ಮಳೆಯೊಂದಿಗೆ ಮಾತುಕತೆ. ತನ್ನೂರಿನಲ್ಲಿ ಸುರಿದ ಮಳೆಯ ಲೆಕ್ಕಾಚಾರದ ದಾಖಲಾತಿ. ವರುಷಕ್ಕೊಮ್ಮೆ ಪೋಸ್ಟ್‌ಮಾರ್ಟಂ. ಅಚ್ಚುಕಟ್ಟಾಗಿ ಕಡತವನ್ನು ರೂಪಿಸಿದ್ದಾರೆ. ಇವರಲ್ಲಿ ಪೂರ್ಣ ಪ್ರಮಾಣದ ವರುಣನ ಜಾತಕವಿದೆ! ಹವಾಮಾನ ಹುಚ್ಚಾಟಗಳ, ಏರಿಳಿತಗಳ ದಿನಮಾನಗಳು ಪ್ರಸಾದರಿಂದ ತಪ್ಪಿಸಿಕೊಳ್ಳುವಂತಿಲ್ಲ! ಒರಿಸ್ಸಾ ಕರಾವಳಿಗೆ ಶತಮಾನದ ಭೀಕರ ಚಂಡಮಾರುತ ಯಾವಾಗ ಅಪ್ಪಳಿಸಿತು? ಮಳೆಯನ್ನು ಅಳೆಯುವ ಪರಿಪಾಠ ಯಾವಾಗ ಆರಂಭವಾಯಿತು? ಅತ್ಯಧಿಕ ಪ್ರಮಾಣದ ಮಳೆ ಸುರಿದ ವರುಷ ಯಾವುದು? ದಶಮಾನದ ಗರಿಷ್ಠತಮ ಮಳೆ ಯಾವಾಗ? ಸರ್ವಾಧಿಕ್ಯ ಮಳೆ ಸುರಿದ ಸಮಯ ಯಾವುದು? ಇವೆಲ್ಲಾ ಮೇಲ್ನೋಟಕ್ಕೆ ಒಂದಂಕದ ಪ್ರಶ್ನೆಯಂತೆ ತೋರುತ್ತದಲ್ವಾ?

ಉತ್ತರ ಹೇಗೆ ಕಂಡುಕೊಳ್ಳಬಹುದು? ಗೂಗಲ್‌ನಲ್ಲಿ ಸಿಗಬಹುದೇನೋ? ಅದೂ ಹುಡುಕಿದರೆ! ಹುಡುಕಲೂ ಪುರುಸೊತ್ತಿಲ್ಲವಲ್ಲ! ಪ್ರಸಾದರ ಮಳೆ ಗಣಿತದ ಕಡತದಲ್ಲಿ ಇಂತಹ ನೂರಾರು ಪ್ರಶ್ನೆಗಳಿಗೆ ಉತ್ತರಗಳಿವೆ. ಒಂದೊಂದು ಉತ್ತರದ ಹಿಂದೆ ಕಾಲಘಟ್ಟದ ಕತೆಯಿದೆ. ಪ್ರಾಕೃತಿಕ ನೋಟವಿದೆ. ಇದು ಕಾಲದ ಇತಿಹಾಸ. ಪಿಜಿಎಸ್‌ಎನ್ ಪ್ರಸಾದರು ಕೃಷಿಕರು. ಅಧಿಕೃತ ಹವಾಮಾನ ತಜ್ಞರು ಮಾಡಬಹುದಾದ ಕೆಲಸವನ್ನು ಒಂಟಿಯಾಗಿ ಮಾಡುತ್ತಿದ್ದಾರೆ. ಬಹುಶಃ ನಾಲ್ಕು ದಶಕದ ಮಳೆ ಲೆಕ್ಕವು ಇಲಾಖೆಯಲ್ಲಿ ಇರಬಹುದೆನ್ನುವ ವಿಶ್ವಾಸ ನನಗಿಲ್ಲ. ದಿನ ದಿನದ ಲೆಕ್ಕಾಚಾರ ಪ್ರಸಾದರಲ್ಲಿದೆ. ಮಾಹಿತಿಯನ್ನು ಹಂಚುವುದು ಅವರಿಗೆ ಪ್ರಿಯ ಹವ್ಯಾಸ. ಮಾತಿಗೆ ಸಿಕ್ಕಾಗ ಮಳೆಯಿಂದಲೇ ಮಾತು ಆರಂಭವಾಗುತ್ತದೆ.

ಸುಳ್ಯ ಪಂಜ ಕರಿಕ್ಕಳದ ಸಾಯಿಶೇಖರ್ ಅವರು ಪ್ರಸಾದರಂತೆ ಮಳೆ ದಾಖಲಿಸುವುದಿಲ್ಲ. ಮಳೆಯು ಯಾವಾಗ ಸುರಿಯಲಿದೆ ಎಂದು ಆ್ಯಪ್ ಆಧಾರದಲ್ಲಿ ಖಚಿತವಾಗಿ ಹೇಳಬಲ್ಲರು. ವಾಟ್ಸ್ಆ್ಯಪ್ ಗುಂಪಿನಲ್ಲಿ ಮ್ಯಾಪ್ ಸಹಿತ ವರದಿಯನ್ನು ಪ್ರಕಟಿಸುತ್ತಾರೆ. ಅವರ ಮಾಹಿತಿ ಸುಳ್ಳಾದುದು ಕಡಿಮೆ. ಇಷ್ಟೊಂದು ಖಚಿತವಾಗಿ ಹೇಗೆ ಹೇಳಬಲ್ಲರು? ಪವಾಡ ವಿದ್ಯೆಯಿಂದಲ್ಲ.


ಹವಾಮಾನ ಇಲಾಖೆಯ ವರದಿಯನ್ನು ನೋಡಿ, ಕೇಳಿ ಬೇಸತ್ತಿದ್ದೇವೆ. ಮೋಡ ಕವಿದ ವಾತಾವರಣವಿದೆ. ಅಲ್ಲಲ್ಲಿ ಚದುರಿದಂತೆ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ತಾಪಮಾನ... ಸಣ್ಣ ಮಗುವಿಗೂ ಬಾಯಿಪಾಠ. ಕೇಳಲು ಕರ್ಣಸುಖ. ವರದಿಯಂತೆ ಸಂಭವವಾದುದು ತೀರಾ ಕಡಿಮೆ. ಹಾಗಾಗಿ ಈಚೆಗೆ ಹವಾಮಾನ ವರದಿಯೆಂದರೆ ನಗೆಪಾಟಲು.

ಸಾಯಿಶೇಖರ್ ಅವರಿಗೆ ಹೇಗೆ ಸಾಧ್ಯವಾಗುತ್ತದೆ? ಇಲಾಖೆಯೊಳಗೆ ಏನಾದರೂ ಒಳ ಒಪ್ಪಂದ ಇದೆಯೋ ಎಂದು ಸಂಶಯ ಪಡಬೇಕಾಗಿಲ್ಲ. ಬದಲಾದ ತಾಂತ್ರಿಕತೆಯನ್ನು ಹೇಗೆ ಬಳಸಿಕೊಳ್ಳುತ್ತಿದ್ದೇವೆ ಎನ್ನುವುದಕ್ಕೆ ಇವರು ಉದಾಹರಣೆ. ಕೇಂದ್ರ ಸರಕಾರದ ಹವಾಮಾನ ಇಲಾಖೆಯಲ್ಲಿ ಸ್ಯಾಟಲೈಟ್ ಆಧಾರದ ವರದಿಗಳು ದಾಖಲಾಗುತ್ತದೆ. ಅದು ಅಂದಂದೇ ಮಾಧ್ಯಮಗಳಿಗೆ ಸಿಗುವಂತಾದರೆ ವರದಿ ಪಕ್ಕಾ ಪ್ರಕಟವಾಗಿ ಜನಮನದೊಳಗೆ ಇಳಿಯುತ್ತದೆ.

ಹಾಗಾದರೆ ವರದಿಗಳು ಜನಕೋಟಿಗೆ ಸಕಾಲಕ್ಕೆ ಸಿಗುತ್ತಿಲ್ಲ ಎಂದಾಯಿತು. ಸಾಯಿಶೇಖರ್ ಹೀಗೆ ಹೇಳುತ್ತಾರೆ, 'ಇಲಾಖೆಯ ಮಾಹಿತಿ ಸರಿಯಾಗಿರುತ್ತದೆ. ಅದು ಮೇಜಿನಿಂದ ಮೇಜಿಗೆ ಹಾರುತ್ತಾ ವರಿಷ್ಠರ ಸಹಿ ಪಡೆದು ಮಾಧ್ಯಮದ ಮೇಜಿಗೆ ಬರುವಾಗಲೇ ಎರಡು ಮೂರು ದಿನ ದಾಟಿರುತ್ತದೆ. ನಂತರ ಪ್ರಕಟವಾಗುವ ವರದಿ ಯಾರಿಗೆ ಬೇಕು? ಈಗ ಹಾಗಲ್ಲ. ಉಪಗ್ರಹ ಆಧಾರಿತವಾಗಿ ಹವಾಮಾನವನ್ನು ದಾಖಲಿಸುವ ಆ್ಯಪ್‌ಗಳು ಬಂದಿವೆ. ಅಂದಂದಿನ ವರದಿಗಳಲ್ಲದೆ ಮುಂದಿನ ಹತ್ತು ದಿವಸದ ವಾತಾವರಣ ಬದಲಾವಣೆಯ ವರದಿಗಳು ದಾಖಲಾಗಿರುತ್ತವೆ. ಇದರಿಂದಾಗಿ ಮಳೆಯ ಲೆಕ್ಕಚಾರ ಪಕ್ಕಾ ಆಗಿರುತ್ತದೆ. ಇದನ್ನು ಮೊಬೈಲಿಗೆ ಇಳಿಸಿಕೊಳ್ಳಬಹುದು'.

ಕೃಷಿಕರಾದ ಇವರಿಗೆ ಎರಡು ವರುಷಗಳಿಂದ ಮಳೆಯೊಂದಿಗೆ ಆಟ. ಆಸಕ್ತರಿಗೆ ಆ್ಯಪ್‌ಗಳ ಮಾಹಿತಿ ನೀಡಬಲ್ಲರು. ಮಾಹಿತಿಯನ್ನೂ ಹಂಚಬಲ್ಲರು. ನಮ್ಮ ಕೈಯಲ್ಲಿಂದು ನಾಲ್ಕಂಕೆ, ಐದಂಕೆ ಮೊತ್ತದ ಮೊಬೈಲ್‌ಗಳಿವೆ. ಅದರ ಬಳಕೆಯು ವಾಟ್ಸ್ಆ್ಯಪ್, ಫೇಸ್‌ಬುಕ್, ಚಾಟ್ ಮಾಡಲು ಬಳಕೆಯಾಗುವುದು ಹೆಚ್ಚು. ಮುಖ್ಯವಾಗಿ ಕೃಷಿ ಬದುಕಿಗೆ ಪೂರಕವಾದ ಇಂತಹ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಾಗ ಮತಿಯು ಅಪ್‌ಡೇಟ್ ಆಗುತ್ತೇವೆ.

ಈಚೆಗೆ ಪಿಜಿಎಸ್‌ಎನ್ ಪ್ರಸಾದರಲ್ಲಿ – 'ಮಳೆಯ ಲೆಕ್ಕವನ್ನು ದಾಖಲಿಸುವುದರಿಂದ ಕೃಷಿಕರಿಗೆ ಏನು ಪ್ರಯೋಜನ' ಎಂದು ಕೇಳಿದ್ದೆ.



ಪ್ರಸಾದ್‌ರ ಮಳೆ ಪಂಚಾಂಗದ ಮಾದರಿ

'ಒಂದು ವರುಷ ಮಳೆ ಅಧಿಕವಾಗಿದ್ದರೆ ನಂತರದ ಮೂರ್ನಾಲ್ಕು ವರುಷ ಕಡಿಮೆಯಾಗುತ್ತದೆ. 2013ರಲ್ಲಿ ಎಂಬತ್ತನಾಲ್ಕು ದಿವಸ ಮಳೆಯಾಗಿದೆ. ಮಳೆಯ ಗಣಿತ ಅರ್ಥವಾಗಲು ನಾಲ್ಕೈದು ವರುಷವಾದ್ರೂ ಬೇಕು. ಈ ರೀತಿಯ ದಾಖಲಾತಿಯಿಂದ ಮುಖ್ಯವಾಗಿ ಅಡಿಕೆಗೆ ಬಾಧಿಸುವ ಕೊಳೆರೋಗ ನಿಯಂತ್ರಣಕ್ಕೆ ಬೋರ್ಡೋ ಸಿಂಪಡಣೆ ಮಾಡುವ ಸಮಯವನ್ನು ಟ್ಯೂನ್ ಮಾಡಿಕೊಳ್ಳಬಹುದು. ಅದಕ್ಕನುಗುಣವಾಗಿ ಸಿದ್ಧತೆಯನ್ನು ಮಾಡಲು ಸಹಕಾರಿ. ಮುಖ್ಯವಾಗಿ ಮಳೆಯ ಲೆಕ್ಕದ ಅಧ್ಯಯನ ಮತ್ತು ಅದನ್ನು ಸೂಕ್ಷ್ಮವಾಗಿ ಗ್ರಹಿಸುವ ಮನಸ್ಸು, ಆಸಕ್ತಿ ಬೇಕು' ಎಂದರು.

'ಮಳೆಗಾಲದಲ್ಲಿ ಕೃಷಿಕರಿಗೆ ಹವಾಮಾನದ ವರದಿಗಳು ಕಾಲಕಾಲಕ್ಕೆ ಬೇಕಾಗುತ್ತದೆ. ಜೊತೆಗೆ ಎಷ್ಟು ಮಳೆಯಾಗಿದೆ ಎಂಬ ಮಾಹಿತಿಯೂ ಇದ್ದರೆ ಕೃಷಿಯ ನಿರ್ವಹಣಾ ಯೋಜನೆ ಮಾಡಿಕೊಳ್ಳಬಹುದು. ಕೃಷಿಕರ ಮಳೆಯ ಲೆಕ್ಕ ಸತ್ಯಕ್ಕೆ ಹತ್ತಿರವಿರುತ್ತದೆ. ಇನ್ನು ಹವಾಮಾನದ ವರದಿಯನ್ನು ಇಲಾಖೆ ನೀಡುತ್ತದೆಯಾದರೂ ಹೆಚ್ಚಿನ ಸಂದರ್ಭಗಳಲ್ಲಿ ವಿಶ್ವಾಸಾರ್ಹತೆ ಕಳೆದುಕೊಳ್ಳುವುದೇ ಹೆಚ್ಚು. ಇಂದು ತಾಂತ್ರಿಕವಾಗಿ ಕಲಿತು ಕೃಷಿಕರೇ ನೀಡುವ ಹವಾಮಾನ ಮಾಹಿತಿ ಮಾರ್ಗಸೂಚಿಯಾಗುತ್ತದೆ. ಈ ಬಾರಿ ನಾನಂತೂ ಕೃಷಿಕರ ವಾಟ್ಸ್ಆ್ಯಪ್ ಗುಂಪಿನಲ್ಲಿ ಹಾಕಿದ ಹವಾಮಾನ ವರದಿ ಆಧರಿಸಿಯೇ ಅಡಿಕೆ ಮರಗಳಿಗೆ ಬೋರ್ಡೋ ಸಿಂಪಡಣೆ ಮಾಡಿದೆ' ಎನ್ನುವ ಹಿಮ್ಮಾಹಿತಿ ನೀಡುತ್ತಾರೆ ಸುಳ್ಯದ ಕೃಷಿಕ ನಾರಾಯಣ.

ಸಾಯಿಶೇಖರ್ ಮಳೆ ಬೀಳುವ ಸಮಯವನ್ನು ಕರಾರುವಾಕ್ಕಾಗಿ ಹೇಳಿದರೆ, ಪ್ರಸಾದ್ ತನ್ನೂರಿನ ಮಳೆಯ ಲೆಕ್ಕವನ್ನು ಬರೆದಿಟ್ಟುಕೊಳ್ಳುತ್ತಾರೆ. ಇಬ್ಬರದ್ದೂ ಹವಾಮಾನವನ್ನು ಓದುವ ಹವ್ಯಾಸ. ಸಮಾಜಮುಖಿ ಕಾರ್ಯ. ಈ ಕೆಲಸವನ್ನು ಗ್ರಹಿಸುವ ಕಣ್ಣುಗಳು ವಿರಳ. ವಾಟ್ಸ್ಆ್ಯಪ್ ಗ್ರೂಪುಗಳಲ್ಲಿ ಬರುವ ಇವರಿಬ್ಬರ ಹವಾಮಾನ ಮಾಹಿತಿಯನ್ನು ಕೃಷಿಕರು ನಂಬಿದ್ದಾರೆ, ನಂಬುತ್ತಾರೆ. ನಿಜಕ್ಕೂ ಇದು ಅಪರೂಪದ ವಿದ್ಯಮಾನ. ಕನ್ನಡ ನಾಡಿನುದ್ದಕ್ಕೂ ತಮ್ಮ ಪಾಡಿಗೆ ಮಳೆ, ಹವಾಮಾನಗಳನ್ನು ದಾಖಲಿಸಿಸುವ ಅನೇಕ ಮಂದಿಯಿದ್ದಾರೆ. ಯಾವುದೇ ಫಲಾಪೇಕ್ಷೆಯಿಲ್ಲದೆ ಬದುಕಿನಲ್ಲಿ ಅದನ್ನು ಹವ್ಯಾಸವಾಗಿ ಅಂಗೀಕರಿಸಿದವರೇ ಅಧಿಕ. ■